[redacted]



# ರಸ್ತೆ ಅಪಘಾತದಲ್ಲಿ ಎಎಸ್ಐ ವಿಜಯಕಾಂತ ಮಿಕಲಿ ನಿಧನ



ಯರಗಟ್ಟಿ: ಪಟ್ಟಣದ ನಿವಾಸಿ ವಿಜಯಕಾಂತ ಮಿಕಲಿ ದೊಡ್ಡವಾಡ ಪೊಲೀಸಯಲ್ಲಿ ಕರ್ತವ್ಯನಿವಯಿಸುತ್ತಿದ್ದ ರಸ್ತೆ ಅಪಘಾತದಲ್ಲಿ ಶನಿವಾರ ಎಎಸ್ಐ ವಿಜಯಕಾಂತ ಮಿಕಲಿ ಮೃತಪಟ್ಟಿದ್ದಾರೆ.

ಕರ್ತವ್ಯನಿವಯಿಸುತ್ತಿದ್ದ ದೊಡ್ಡವಾಡ ಆರಕ್ಷಕ ಠಾಣೆಯ ಎಎಸ್ಐ ವಿಜಯಕಾಂತ ಮಿಕಲಿ (51) ರಸ್ತೆ ಅಪಘಾತದಲ್ಲಿ ದೊಡವಾಡ ಗ್ರಾಮದ ಬೆಳಗಾವಿ–ಬಾಗಲಕೋಟೆ ರಸ್ತೆಯಲ್ಲಿ ರಸ್ತೆ ಅಪಘಾತದಲ್ಲಿ ಎಎಸ್ಐ ವಿಜಯಕಾಂತ ಮಿಕಲಿ ಹಣೆ ಮತ್ತು ತಲೆಗೆ ಗಂಭೀರ ಪೆಟ್ಟಾಗಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಗೋಕಾಕ ಸಾಗಿಸುವಾಗ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದಾರೆ. ಚಿಕಿತ್ಸೆ ವಿಫಲವಾಗಿ ರಾತ್ರಿ ಅಸು ನೀಗಿದ್ದಾರೆ.

ಮೃತ ವಿಜಯಕಾಂತ ಒರ್ವ ಪುತ್ರಿ, ಪತ್ನಿ ಮತ್ತು ತಾಯಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸರಕಾರಿ ಗೌರವಗಳೊಂದಿಗೆ ಪಡೆಯಲಾಯಿತು

ಈ ಸಂದರ್ಭದಲ್ಲಿ ಬೆಂಗಳೂರು ಎಸ್ಪಿ ಜಿನೇಂದ್ರ ಖನಗಾಂವಿ, ರಾಮದುರ್ಗ ಡಿವೈಎಸ್ಪಿ ಎಂ. ಪಾಂಡುರಂಗಯ್ಯ, ಬೈಲಹೊಂಗಲ ಡಿವೈಎಸ್ಪಿ, ರವಿ ನಾಯ್ಕ, ಮುರಗೋಡ, ಸಿಪಿಐ ಆಯ್. ಎಂ. ಮಠಪತಿ, ಕಿತ್ತೂರು ಸಿಪಿಐ ಎಂ.ಎಂ. ಡಪ್ಪಿನ, ಯರಗಟ್ಟಿ ಪಿಎ??? ಆಯ್. ಎಂ. ಹಿರೇಗೌಡರ, ಕಿತ್ತೂರು ಪಿಎ??? ಪ್ರವೀಣ ಗಂಗೋಳಿ, ಸೇರಿದಂತೆ ಮುರಗೋಡ, ದೊಡವಾಡ ಪೊಲೀಸ್ ಠಾಣೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಯರಗಟ್ಟಿ : ಸಮೀಪದ ಬಿಜಗುಪ್ಪಿ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ 623ನೇ ನಮ್ಮೂರ ನಮ್ಮ ಕೆರೆ ಕಾರ್ಯಕ್ರಮದಡಿ ಪುನಶ್ಚೇತನ ಗೊಳಿಸಲಾದ ಬಿಜಗುಪ್ಪಿ ಸರ್ಕಾರಿ ಕೆರೆ ನಾಮಫಲಕ ಅನಾವರಣ ಮತ್ತು ಕೆರೆ ಹಸ್ತಾಂತರ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಜಿಲ್ಲಾ ನಿರ್ದೇಶಕರು ಲವ ಕುಮಾರ, ಯರಗಟ್ಟಿ ತಾಲೂಕಿನ ಯೋಜನಾಧಿಕಾರಿ ಸತೀಶ್ ಡಿ ಮಾಜಿ ಜಿಲ್ಲಾ ಪಂಚಾಯತ ಅಧ್ಯಕ್ಷರಾದ ಮಾರುತಿ ಕೊಪ್ಪದ, ಶಂಕರಾವ ಸಿಕನಿಸ, ಕಮಿಟಿಯ ಉಪಾಧ್ಯಕ್ಷ ಪತ್ರೆಪ್ಪ ಕೊಪ್ಪದ, ಗ್ರಾ. ಪಂ. ಅಧ್ಯಕ್ಷ ಬಸವರಾಜ್ ಕಮಿಟಿಯ ಕೌಶಾಧಿಕಾರಿಗಳಾದ ಪ್ರಕಾಶಗೌಡ ಪಾಟೀಲ, ಮಾಂತೇಶ, ಜಿಲ್ಲಾ ಜನಜಾಗೃತಿ ಸದಸ್ಯರಾದ ಸಿದ್ದಣ್ಣ ಇಂಗಳಗಿ, ರಂಗಪ್ಪ ಅತಾರಟೆ, ಸಿದ್ದಪ್ಪ ಸಿಂಗಾರಿ, ಅಡಿವಿಯಪ್ಪ ರುದ್ರಪ್ಪ, ಲಕ್ಷ್ಮಣ ಕೊಡುಗಿ ಸೇರಿದಂತೆ ಅನೇಕ ಗಣ್ಯರು ಮತ್ತು ಊರಿನ ಸಂಘದ ಮಹಿಳೆಯರು ಭಾಗವಹಿಸಿದ್ದರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಲೋಕಸಭೆ ಚುನಾವಣೆ–2024

# ಚುನಾವಣಾ ಆಯೋಗದ ಮಾರ್ಗಸೂಚಿ ಪಾಲನೆ ಕಡ್ಡಾಯ



ಗದಗಮಾರ್ಚ :ಲೋಕಸಭಾ ಚುನಾವಣೆಗೆ ಚುನಾವಣಾ ಆಯೋಗದ ಮಾರ್ಗಸೂಚಿಯನ್ನು ರಾಜಕೀಯ ಪಕ್ಷಗಳು ಕಡ್ಡಾಯವಾಗಿ ಪಾಲನೆ ಮಾಡಬೇಕು ಎಂದು ಜಿಲ್ಲಾಧಿಕಾರಿ ವೈಶಾಲಿ. ಎಂ.ಎಲ್. ಅವರು ಹೇಳಿದರು.

ಗದಗ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರವಿವಾರ ಜರುಗಿದ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದ ಅವರು ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಚುನಾವಣಾ ಆಯೋಗದ ಮಾರ್ಗಸೂಚಿ ಪಾಲಿಸಿ ತಾತ್ಕಾಲಿಕವಾಗಿ ಅಗತ್ಯವಿದ್ದಲ್ಲಿ ಪಕ್ಷದ ಕಚೇರಿ ಮಾಡಬಹುದು ಹಾಗೂ ಪಕ್ಷದ ಚಿನ್ನೆ ಹೊಂದಿರುವ ಬಟ್ಟೆ ಧರಿಸಿ ಬರುವಹಾಗಿಲ್ಲ ಮತ್ತು ಪ್ರಚಾರಕ್ಕಾಗಿ ಪ್ರಾಣಿಗಳನ್ನು ಹಾಗೂ ಮಕ್ಕಳ ಬಳಕೆ ಮಾಡಬಾರದು ಹಾಗೂ ಪೋಲಿಂಗ ಸ್ಟೇಷನ್ ಒಳಗಡೆ ಮತ್ತು ದಾರ್ಮಿಕ ಸ್ಥಳಗಳಲ್ಲಿ ಸಭೆ ಪ್ರಚಾರ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಧರ್ಮ, ಜಾತಿಯನ್ನು ತೆಜೊವದೆ ಮಾಡಬಾರದು ಎಂದು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಸೂಚಿಸಿದರು

ಬೆಳಿಗ್ಗೆ 6 ರಿಂದ ರಾತ್ರಿ 10 ವರೆಗೆ ಪ್ರಚಾರಕ್ಕೆ ಅವಕಾಶವಿದೆ, ಎಲ್ಲರು ನಿಯಮಗಳನ್ನು ಸರಿಯಾಗಿ ಪಾಲನೆ ಮಾಡಲು ಅವರು ಹೇಳಿದರು ಪಕ್ಷದ ಪ್ರತಿನಿಧಿಗಳು ಈಗಲೇ ಮತರಾರರ ಪಟ್ಟಿಯನ್ನು ಪರಿಶೀಲನೆ ಮಾಡಿಕೊಳ್ಳಬೇಕು ಹಾಗೂ ಏಪ್ರಿಲ್ 9 ರವರೆಗೆ ಓಟರ್ ಐಡಿ ಮಾಡಿಸಲು ಅವಕಾಶವಿದ್ದು ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಪ್ರಚಾರ ಸಾಮಗ್ರಿಗಳ ಮುದ್ರಿಸಿದ ಮಾಹಿತಿಯನ್ನು ಆಯಾ ಜಿಲ್ಲೆಯ ಚುನಾವಣೆ ಅಧಿಕಾರಿಗಳಿಗೆ ನೀಡಬೇಕು ಸೂಚಸಿದರು. ಮತದಾನದ ಕೊನೆಯ 48 ಗಂಟೆಯಲ್ಲಿ ಚುನಾವಣಾ ಅಕ್ರಮಕ್ಕೆ ಅವಕಾಶ ನೀಡದೆ ಸರಿಯಾಗಿ ಮಾರ್ಗಸೂಚಿ ಅರಿತು ಪಾಲಿಸಬೇಕು ಹಾಗೂ ಚುನಾವಣಾ ವೆಚ್ಚದ ಬಗ್ಗೆ ಅಭ್ಯರ್ಥಿಗಳು ಗಮನಹರಿಸಬೇಕು ಎಂದು ಹೇಳಿದರು.85 ವರ್ಷದ ಮೇಲ್ಪಟ್ಟ ವಯಸ್ಸಿನವರಿಗೆ ಮನೆಯಿಂದಲೇ ಮತದಾನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಅದರ ಸದುಪಯೋಗ ಪಡೆದುಕೊಳ್ಳಬೇಕೆಂದು ಎಂದು ಅವರು ಹೇಳಿದರು.

*ಜಿಲ್ಲಾ ದೂರು ನಿರ್ವಹಣಾ ಕೇಂದ್ರ:* ಜಿಲ್ಲೆಯಲ್ಲಿ ಯಾವುದೇ ರೀತಿ ದೂರುಗಳ ನಿರ್ವಹಣೆಗಾಗಿ ಸೈಯದ್ ಜೋಹೈಬುಲ್ಲಾ, ಜಿಲ್ಲಾ ವ್ಯವಸ್ಥಾಪಕರು, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಗದಗ (ಮೊ.ನಂ: 8277944217) ಇವರನ್ನು ನೋಡಲ್ ಅಧಿಕಾರಿಗಳೆಂದು ನೇಮಕ ಮಾಡಲಾಗಿದೆ. ಇವರ ಅಧೀನದಲ್ಲಿ Complaint Monitoring Team, CVIGL ತಂಡ, 1950 ಕಾಲ್ ಸೆಂಟರ್ ಹಾಗೂ ಜಿಲ್ಲಾ ಕಂಟ್ರೋಲ್ ರೂಂ ಕಾರ್ಯನಿರ್ವಹಿಸುತ್ತವೆ.

ಸಿವಿಜಿಲ್, 1950 ಬಳಕೆಮಾಡಿ ದೂರು ನೀಡಿ, ಮಾಹಿತಿ ಪಡೆಯಿರಿ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ ಸಿಇಓ ಭರತ್ ಎಸ್. ಮಾತನಾಡಿ, ಮಾದರಿನೀತಿ ಸಂಹಿತೆಯನ್ನು ಎಲ್ಲ ರಾಜಕೀಯ ಪಕ್ಷಗಳು ಸೇರಿದಂತೆ ಎಲ್ಲರು ಪಾಲಿಸಬೇಕು. ಚುನಾವಣೆಯ ಮತದಾನವನ್ನು ಎಲ್ಲರೂ ಪ್ರಜಾತಂತ್ರದ ಸಂಬ್ರಮದಂತೆ ಆಚರಣೆಮಾಡಿ, ಪಾಲ್ಗೊಂಡು ಮತ ಚಲಾಯಿಸಬೇಕು ಎಂದರು. ಸಭೆಯಲ್ಲಿ ಇಲಾಖೆಯ ಅಧಿಕಾರಿಗಳು, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಜರಿದ್ದರು.

### ಲೋಕಸಭಾ ಚುಣಾವಣೆ: ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆಯಲ್ಲಿ ಡಿಸಿ ಸೂಚನೆ

# ಸಭೆ, ಸಮಾರಂಭ, ಚುನಾವಣಾ ಪ್ರಚಾರಗಳಿಗೆ ಪೂರ್ವಾನುಮತಿ ಕಡ್ಡಾಯ



ಕೊಪ್ಪಳ, ಮಾರ್ಚ್ ಲೋಕಸಭಾ ಚುನಾವಣೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಸಭೆ, ಸಮಾರಂಭ, ಚುನಾವಣಾ ಪ್ರಚಾರಗಳಿಗೆ ಅಗತ್ಯವಿರುವ ಪೂರ್ವಾನುಮತಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ನಲಿನ್ ಅತುಲ್ ಅವರು ಸೂಚನೆ ನೀಡಿದರು.

ಲೋಕಸಭಾ ಚುನಾವಣೆ–2024ರ ಹಿನ್ನೆಲೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯಲ್ಲಿ ಅವರು ಮಾತನಾಡಿದರು.

ರಾಜಕೀಯ ಪಕ್ಷಗಳು ಚುನಾವಣೆ ಸಂಬಂಧ ನಡೆಸಲಾಗುವ ಸಭೆ–ಸಮಾರಂಭಗಳು, ಪ್ರಚಾರ ಕಾರ್ಯಕ್ರಮಗಳಿಗೆ, ವಾಹನ ಬಳಕೆಗಾಗಿ ಅನುಮತಿ ನೀಡಲು ಆಯಾ ವಿಧಾನಸಭಾ ಕ್ಷೇತ್ರಗಳ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಏಕ ಗವಾಕ್ಷಿ ಸಮಿತಿ ರಚಿಸಲಾಗಿದೆ. ರಾಜಕೀಯ ಪಕ್ಷಗಳು ಅನುಮತಿಗಾಗಿ ಚುನಾವಣಾಧಿಕಾರಿಗಳ ಕಾರ್ಯಾಲಯದಲ್ಲಿ ಅರ್ಜಿ ಸಲ್ಲಿಸಬೇಕು. ರಾಜಕೀಯ ಪಕ್ಷಗಳು ಆನ್‌ಲೈನ್ ಮೂಲಕವೂ ಅರ್ಜಿ ಸಲ್ಲಿಸಲು ಭಾರತ ಚುನಾವಣಾ ಆಯೋಗವು "ಸುವಿಧಾ ಆಪ್" ಪರಿಚಯಿಸಿದ್ದು, ಈ ಪೋರ್ಟಲ್‌ನ ಮೂಲಕ ಅಥವಾ ಖುದ್ದಾಗಿ ಎಆರ್‌ಓ ಕಚೇರಿಗೆ ಭೇಟಿ ನೀಡಿ ಅನುಮತಿ ಪಡೆಯಬಹುದಾಗಿದೆ. ಜಿಲ್ಲಾ ಮಟ್ಟದ ಕಾರ್ಯಕ್ರಮಗಳಿಗೆ ಮತ್ತು ವಾಹನ ಪರವಾನಗೆಗಾಗಿ ಜಿಲ್ಲಾಧಿಕಾರಿಗಳ ಕಚೇರಿಯಿಂದ ಅನುಮತಿ ಪಡೆಯಬೇಕು. ಸ್ಟಾರ್ ಪ್ರಚಾರಕರು ಹಾಗೂ ಪ್ರಚಾರ ಸ್ಥಳಗಳ ಬಗ್ಗೆ ಮುಂಚಿತವಾಗಿ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ಮಾದರಿ ನೀತಿ ಸಂಹಿತೆಯು ಎಲ್ಲಾ ಪಕ್ಷಗಳು, ಅಭ್ಯರ್ಥಿಗಳಿಗೂ ಅನ್ವಯವಾಗಲಿದ್ದು ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ನಿಯಮಗಳನ್ನು ಪಾಲನೆ ಮಾಡುವುದರಿಂದ ಮುಕ್ತ, ನ್ಯಾಯಸಮ್ಮತ, ಪಾರದರ್ಶಕವಾಗಿ ಚುನಾವಣೆ ನಡೆಸಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲಾ ಪಕ್ಷಗಳು ಸಹ ಸಹಕಾರ ನೀಡಬೇಕೆಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಜಿಲ್ಲಾಧಿಕಾರಿ ಕಚೇರಿ ಚುನಾವಣಾ ವಿಭಾಗದ ನಾಗರಾಜ, ಪ್ರಸನ್ನ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಇದ್ದರು.

# ಶ್ರೀ ಕದಳಿವನಮಠದ 27ನೇ ವಾರ್ಷಿಕೋತವ ಅದಿದೇವಾನಂದಗಿರಿ ಸ್ವಾಮಿಗಳ ಪುಣ್ಯಾರಾಧನೆ

ಗದಗ 18 : ದಿನಾಂಕ 19 ರಂದು ಮಂಗಳವಾರ ಕಳಸಾಪೂರ ರಸ್ತೆಯಲ್ಲಿರುವ ಶ್ರೀ ಕದಳಿವನಮಠ 27ನೇ ವಾರ್ಷಿಕೋತ್ಸವ, ಶ್ರೀ ಶ್ರೋ.ಬ್ರ.ಅದ್ವೈತಾನಂದ ಸ್ವಾಮಿಗಳು ಹಾಗೂ ಅಧಿದೇವಾನಂದಗಿರಿ ಸ್ವಾಮಿಗಳ ಪುಣ್ಯರಾಧನೆ ಕಾರ್ಯಕ್ರಮದ ನಮಿತ್ಯ ಅವರ ಸ್ಮಾರಕ ಗದ್ದುಗೆಯ ರುದ್ರಾಭಿಷೇಕ ಬೆಳಿಗ್ಗೆ 6 ಗಂಟೆಗೆ ನೆರವೇರುತ್ತದೆ. ನಂತರ ಕದಳಿವನ ಅಕ್ಕನ ಬಳಗದವರಿಂದ ಹಾಗೂ ಜೈ ಹನುಮಾನ ಅಕ್ಕನಬಳಗದವರಿಂದ 8.30ಕ್ಕೆ ಲಲಿತಾ ಸಹಸ್ರನಾಮಾವಳಿ, ಕುಂಕುಮಾರ್ಚನೆ, ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಶಿವಾನಂದ ಪಾಟೀಲ ಇವರು ನಡೆಸಿಕೊಡುವರು. 9 ಗಂಟೆಗೆ ಓಂಕಾರ ಧ್ವಜಾರೋಹಣ ಪೂಜ್ಯ ಜಗದ್ಗುರು ಅಭಿನವ ಶಿವಾನಂದ ಮಹಾಸ್ವಾಮಿಗಳವರ ಅಮೃತ ಹಸ್ತದಿಂದ ನೆರವೇರುವುದು. ಶ್ರೋ.ಬ್ರ. ಆದಿದೇವಾನಂದಗಿರಿ ಸ್ವಾಮಿಗಳ ಸಮಾಧಿ ಉದ್ಘಾಟನೆಯು ಪೂಜ್ಯ ಜ. ಅದೃಶ್ಯಕಾಡಸಿದ್ದೇಶ್ವರ ಮಹಾಸ್ವಾಮಿಗಳು ಸಿದ್ಧಗಿರಿ ಸಂಸ್ಥಾನಮಠ ಕನ್ನೆರಿ ಇವರಿಂದ ಜರುಗಲಿದೆ.

ಬೆಳಿಗ್ಗೆ 9.30ಕ್ಕೆ ಪ.ಪೂ. ಜ. ಅಭಿನವ ಶಿವಾನಂದ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಜ.ಶ್ರೀ ಶಿವಾನಂದ ಭಾರತಿ ಮಹಾಸ್ವಾಮಿಗಳಿ ಪಾವನ ಸಾನಿಧ್ಯದಲ್ಲಿ ಹಾಗೂ ಪ. ಪೂ. ಜಗದ್ಗುರು ಅದೃಶ್ಯ ಕಾಡಸಿದ್ದೇರ್ಶವರ ಮಹಾಸ್ವಾಮಿಗಳು ಹಾಗೂ ಮ.ನಿ.ಪ್ರ. ಜ.ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಸತ್ಸಂಗದ ಉದ್ಘಾಟನೆ ನೆರವೇರುವುದು. ನೇತೃತ್ವವನ್ನು ಪ. ಪೂ. ಶ್ರೀ ನಿಜಗುಣ ಸ್ವಾಮಿಗಳು, ಪ.ಪೂ. ಶ್ರೀ ಶಂಕರಾರೂಢ ಮಹಾಸ್ವಾಮಿಗಳು ವಹಿಸುವರು. ಸಮ್ಮುಖವನ್ನು ಪ. ಪೂ. ಶ್ರೀ. ಡಾ. ಆರೂಢ ಭಾರತಿ ಸ್ವಾಮಿಗಳು, ಪ. ಪೂ. ಶ್ರೀ ಶಿವಬಸವ ಸ್ವಾಮಿಗಳು, ಪ. ಪೂ. ಶ್ರೀ ಶಿವಾನಂದ ಸ್ವಾಮಿಗಳು ವಹಿಸುವರು. ಸಂಜೆ 4 ಗಂಟೆಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಮಹಿಳಾ ಘೋಷ್ಠಿಯಲ್ಲಿ ಮಾತೆಯರಾದ ಅಕ್ಕಮಹಾದೇವಿ, ವಿದ್ಯಾತಾಯಿ, ದಯಾಭಾರತಿ ತಾಯಿ, ಶಾಂತಮಾ ತಾಯಿ, ರೇಣುಕಾ ಅಕ್ಕನವರು, ಸರಸ್ವತಿ ತಾಯಿ, ಯೋಗೇಶ್ವರ ತಾಯಿ. ಬಸಮ್ಮಾ ತಾಯಿ, ಪರಮೇಶ್ವರಿ ತಾಯಿ, ಅನಸೂಯಾ ತಾಯಿ, ಶರಣೆ ಡಾ. ಸುನಂದಾ ತಾಯಿ, ರಾಜೇಶ್ವರಿ ತಾಯಿ, ಅಕ್ಕಮಹಾದೇವಿ ತಾಯಿ, ಮುಕ್ತಾತಾಯಿ, ಗೀತಮ್ಮ ತಾಯಿ, ಅನಸೂಯಾ ತಾಯಿ, ಓಂಕಾರಾನಂದಮಹಿ ಮಾತಾಜಿ, ಮಹಾದೇವಮ್ಮ, ಲಲಿತಮ್ಮ ತಾಯಿ, ಶರಣೆ ಬಸಮ್ಮ ತಾಯಿ, ಡಾ. ಮಹಾದೇವಮ್ಮ ತಾಯಿ, ನಂದಾತಾಯಿ, ಶ್ರೀದೇವಿ ತಾಯಿ ಭಾಗವಹಿಸುವರು.

ಮುಖ್ಯ ಅತಿಥಿಗಳಾಗಿ ಡಾ. ಎಚ್.ಕೆ. ಪಾಟೀಲ ಕಾನೂನು ಮತ್ತು ಸಂಸದೀಯ ವ್ಯವಹಾರ, ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರು, ಶ್ರೀಮತಿ ವಿದ್ಯಾವತಿ ಅಮರನಾಥ ಗಡಗಿ, ಶ್ರೀಮತಿ ಉಷಾದಾಸರ, ಶಿವಣ್ಣ ಮುಳಗುಂದ, ರಾಮಕೃಷ್ಣ ಪಾಂಡ್ರೆ, ಅಂದಾನಪ್ಪ ಗುರಪ್ಪ ಹಡಪದ, ವಿರೂಪಾಕ್ಷಪ್ಪ ಬಸಪ್ಪ ಕೊಣ್ಣೂರ ಭಾಗವಹಿಸುವರು. ಇದೇ ಸಂದರ್ಭಧಲ್ಲಿ ಡಾ. ಬಸವರಾಜ ಚಂದ್ರಪ್ಪ ನಾವಿ, ಶ್ರೀಮತಿ ಮುಕ್ತಾ ರವಿಕುಮಾರ ಜಗರಕರ, ಶ್ರೀಮತಿ ಅನಸೂಯಾ ಸಿದ್ಧಲಿಂಗಪ್ಪ ಮೇಲಗಿರಿ, ತಿಪ್ಪವ್ವ ರಾಮಪ್ಪ ಗಡ್ಡೆನವರ, ರವಿ ತೋ ಹಡಪದ ಇವರಿಗೆ ಸನ್ಮಾನ ಜರುಗಲಿದೆ. ಪ್ರಸಾದ ಸೇವೆಯನ್ನು ಗಂಗಮ್ಮ ವೀರಪ್ಪ ಪಟ್ಟಣಶೆಟ್ಟಿ, ಶಿವಕುಮಾರ ಮಳಗಿ, ಶ್ರೀಮತಿ ವೀಣಾ ಅನೀಲ, ಗದಗ, ಶ್ರೀಮತಿ ರೇಣುಕಾ ವೆಂಕಪ್ಪ ರಾಟಿಯವರ, ಟಿ.ವೈ. ಹಡಪದ ವಹಿಸಿಕೊಂಡಿದ್ದಾರೆ. ದಿನಾಂಕ 20 ಬುಧವಾರ ಬೆಳಿಗ್ಗೆ 9 ಗಂಟೆಗೆ ವೇದಾಂತ ಗೋಷ್ಠಿ ಮಹಾತ್ಮರಿಂದ ಉಪದೇಶಾಮೃತ ನಂತರ ಮಹಾ ಮಂಗಳಾರತಿ ಹಾಗೂ ಮಹಾ ಪ್ರಸಾಧ ನೆರಯುವದು ಕಾರ್ಯಕ್ರಮ ಮಂಗಲವಾಗುವುದು.

ಈ ಮಂಗಲಮಯ ಕಾರ್ಯಕ್ರಮಕ್ಕೆ ಇಂಗಳಿಗಿ, ಸಂಗಾನಟ್ಟಿ, ಕಾರತಗಿ, ಹನುಮನಹಳ್ಳಿ, ರಾಮಾಪೂರ, ರಾಮನಕೊಪ್ಪ, ಕಲ್ಲೋಳಿ, ಅಡವಿಸೋಮಾಪೂರ, ನೀರಲಗಿ, ಬೀರಹಳ್ಳಿ, ಕಲ್ಲೋಳಿ, ಹೆಬ್ಬಳ್ಳಿ ಸದ್ಭಕ್ತರು ಈ ಕಾರ್ಯಕ್ರಮಕ್ಕೆ ಸರ್ವರೂ ಪಾಲ್ಗೊಂಡು ಪುನೀರಾಗಬೇಕೆಂದು ವಿನಂತಿ.

# ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರ ವಾರ್ಷಿಕೋತ್ಸವ ಅಂಗವಾಗಿ ಕ್ರೀಡಾಕೂಟ

ಗದಗ–18 : ಎಸ್.ವಾಯ್.ಬಿ.ಎಂ.ಎಸ್. ಯೋಗಪಾಠಶಾಲೆಯ ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರ ಸಿದ್ಧಲಿಂಗ ನಗರ ಗದಗ ಸಂಸ್ಥೆಯವರು 15 ನೆಯ ವಾರ್ಷಿಕೋತ್ಸವದ ಅಂಗವಾಗಿ ಸದಸ್ಯರಿಗಾಗಿ ದಿನಾಂಕ 24–3–2024 ರವಿವಾರ ಸಿದ್ಧಲಿಂಗ ನಗರದಲ್ಲಿನ ಬಸವ ಪ್ರಭೆ ಆವರಣ (ಕ್ಯಾಂಪಸ್) ದಲ್ಲಿ ಕ್ರೀಡಾಕೂಟ ಆಯೋಜಿಸಿರುವರು. ಕ್ರೀಡಾಕೂಟದಲ್ಲಿ ವೇಗದ ನಡಿಗೆ, ಲಗೋರಿ ಸ್ಟ್ಯಾಂಡ್ ಬೀಳಿಸುವುದು, ಯೋಗಾಸನ, ಯೋಗ ಆಶುಭಾಷಣ (ಯೋಗ ಪಿಕ್ ಆ್ಯಂಡ್ ಸ್ಪೀಚ್) ಪುರಾಣಿ–ಕಡ್ಡಿ ಬೇಳೆ ಬೇರ್ಪಡಿಸುವದು ಹೀಗೆ ಒಟ್ಟು 5 ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಈ 5 ಸ್ಪರ್ಧೆಗಳಲ್ಲಿ ಸ್ಪರ್ಧಿಯು ತಮಗಿಷ್ಟವಾದ 3 ಸ್ಪರ್ಧೆಗಳಲ್ಲಿ ಭಾಗವಹಿಸಬಹುದು. ವಿಜೇತರಿಗೆ ಪ್ರಶಸ್ತಿ ಪತ್ರ, ಬಹುಮಾನ ಮತ್ತು ಭಾಗವಹಿಸಿದವರಿಗೆಲ್ಲರಿಗೂ ಪ್ರಮಾಣ ಪತ್ರಗಳನ್ನು ನೀಡಲಾಗುವುದು. ಪ್ರವೇಶ ಉಚಿತವಾಗಿದೆ.ಭಾಗವಹಿಸಲಿಚ್ಛಿಸುವವರು ದಿನಾಂಕ 23–3–2024 ಶನಿವಾರ ಸಂಜೆ 6 ಗಂಟೆಯೊಳಗಾಗಿ ಖುದ್ದಾಗಿ ಇಲ್ಲವೆ ಫೋನ್ / ವಾಟ್ಸಾಪ್ ಮೂಲಕ ಶ್ರೀಮತಿ ವಿಜಯಾ ಚನ್ನಶೆಟ್ಟಿ ಸಂಯೋಜಕರು ಕ್ರೀಡಾ ಕೂಟ ಇವರಲ್ಲಿ ಹೆಸರು ನೊಂದಾಯಿಸಿಕೊಳ್ಳಬೇಕು. ತಡವಾಗಿ ಹೆಸರು ನೊಂದಾಯಿಸಸಿಜದವರಿಗೆ ಪ್ರವೇಶ ಇರುವುದಿಲ್ಲ.

ಹೆಚ್ಚಿನ ಮಾಹಿತಿ ಮತ್ತು ಹೆಸರು ನೊಂದಾಯಿಸಿಕೊಳ್ಳಲು ಸಂಪರ್ಕ ದೂರವಾಣಿ ಸಂಖ್ಯೆ 9481928404. ಸ್ಪರ್ಧೆಗಳಲ್ಲಿ ಆಸಕ್ತ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸ್ಪರ್ಧೆಗಳನ್ನು ಯಶಸ್ವಿಗೊಳಿಸಲು ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದ ಅಧ್ಯಕ್ಷೆ ಜಯಶ್ರೀ ವಸ್ತ್ರದ ತಿಳಿಸಿರುವರು.

# ರೋಗಗಳನ್ನು ಶಾಶ್ವತವಾಗಿ ಪರಿಹಾರ ಮಾಡುವ ಶಕ್ತಿ ಆಯುರ್ವೇದಕ್ಕೆ ಇದೆ :ಗುಣದಾಳ




ಮೂಡಲಗಿ: ಆಯುರ್ವೇದ ಚಿಕಿತ್ಸೆಯು ಅತ್ಯಂತ ಪರಿಣಾಮಕಾರಿಯಾದ ಚಿಕಿತ್ಸೆಯಾಗಿದ್ದು, ರೋಗಳನ್ನು ಶಾಶ್ವತವಾಗಿ ಪರಿಹಾರ ಮಾಡುವ ಶಕ್ತಿ ಆಯುರ್ವೇದಕ್ಕೆ ಇದೆ' ಎಂದು ಡಾ. ಸುರೇಶ ಗುಣದಾಳ ಹೇಳಿದರು.

ರವಿವಾರದಂದು ಪಟ್ಟಣದ ಕುರುಹಿನಶೆಟ್ಟಿ ಸೊಸಾಯಿಟಿಯ ಆವರಣದಲ್ಲಿ ಜರುಗಿದ, ಗುಣದಾಳ ಆಸ್ಪತ್ರೆಯ ಸ್ವಸ್ಥಾಯು ಆಯುರ್ವೇ ಪಂಚಕರ್ಮ ಚಿಕಿತ್ಸಾ ಕೇಂದ್ರ ಹಾಗೂ ಲಯನ್ಸ್ ಕ್ಲಬ್ ಮೂಡಲಗಿ ಪರಿವಾರ ಸಹಯೋಗದಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣೆ ಹಾಗೂ ಆಯುರ್ವೇದ ಚಿಕಿತ್ಸಾ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು ಆಯುರ್ವೇದ ಚಿಕಿತ್ಸೆಯಲ್ಲಿ ಯಾವುದೇ ನ್ಯೂನ್ಯತೆಗಳು ಮತ್ತು ಅಡ್ಡಪರಿಣಾಮಗಳು ಇರುವುದಿಲ್ಲ ಎಂದರು.

ಡಾ. ಎಸ್.ಎಸ್. ಪಾಟೀಲ ಮಾತನಾಡಿ ಅಲೋಪತಿಯಲ್ಲಿ ವಾಸಿಯಾಗದ ಕಾಯಲೆಗಳು ಆಯುರ್ವೇದದಲ್ಲಿ ವಾಸಿಯಾಗುತ್ತಿವೆ. ಪರಿಣಾಮ ನಿಧಾನವಾಗಿದ್ದರು ಶಾಶ್ವರ ಪರಿಹಾರ ದೊರೆಯುತ್ತದೆ ಎಂದರು.ಮೂಡಲಗಿಯ ಶಿಕ್ಷಣ ಸಂಸ್ಥೆಯ ಅಧ್ಯಕ್ತ ವೆಂಕಟೇಶ ಸೋನವಾಲಕರ, ಪುರಸಭೆ ಸದಸ್ಯ ಈರಣ್ಣ ಕೊಣ್ಣೂರ, ಸಾಹಿತಿ ಬಾಲಶೇಖರ ಬಂದಿ ಮಾತನಾಡಿದರು.

ಲಯನ್ಸ್ ಕ್ಲಬ್ ಮೂಡಲಗಿ ಪರಿವಾರ ಅಧ್ಯಕ್ಷ ಶ್ರೀಶೈಲ್ ಲೋಕನ್ನವರ ಅಧ್ಯಕ್ಷತೆ ವಹಿಸದ್ದರು. ಅತಿಥಿಗಳಾಗಿ ಡಾ. ವಿನಾಯಕ ಮಾಳಿ, ಡಾ. ಅರುಣ ಎಂ, ಡಾ. ಸಮೀರ, ಸುಪ್ರೀತ ಸೋನವಾಲಕರ, ಕೃಷ್ಣಾ ಕೆಂಪಸಕ್ತಿ, ಶಿವಾನಂದ ಗಾಡವಿ, ಶಿವಭೋದ ಯರಜರ್ವಿ, ಸುರೇಶ ದೇಸಾಯಿ,

ಶಿವಾನಂದ ಕಿತ್ತೂರ, ಡಾ. ಪ್ರಶಾಂತ ಬಾಬಣ್ಣವರ, ಡಾ. ಸಚಿನ ಟಿ. ಇದ್ದರು.ಶಿಬಿರದಲ್ಲಿ 90ಕ್ಕೂ ಅಧಿಕ ಜನರ ಉಚಿತ ತಪಾಸಣೆಯನ್ನು ಮಾಡಿದರು ಮತ್ತು ಉಚಿತವಾಗಿ ಔಳಧಿಯನ್ನು ನೀಡಿದರು. ಅಶೋಕ ಗುಣದಾಳ ಸ್ವಾಗತಿಸಿದರು, ಶಿವಬೋಧ ಯರಝರ್ವಿ ನಿರೂಪಿಸಿದರು, ಡಾ. ಸುರೇಶ ಬಾಲಬಾಂವಿ ವಂದಿಸಿದರು.

# ಸಂಗೀತ ಕಲಾವಿದೆ ಸುಜಾತಾ ಕಲಮೇಶಗೆ ಸತ್ಕಾರ



ಬೆಳಗಾವಿ : ವಾರದ ವಚನೋತ್ಸವಕಾರ್ಯಕ್ರಮದಲ್ಲಿ ಸಂಗೀತಕಲಾವಿದೆ ಸುಜಾತಾ ಕಲಮೇಶ ಇವರನ್ನುರವಿವಾರ ಸತ್ಕರಿಸಿ ಗೌರವಿಸಲಾಯಿತು.

ಝಿಕನ್ನಡ ವಾಹಿನಯಲ್ಲಿ ಪ್ರಸಾರವಾಗುವ ಸರಿಗಮಪಕಾರ್ಯಕ್ರಮದಲ್ಲಿ ಸುಜಾತಾಇವರುಆಯ್ಕೆ ಹೊಂದಿ ಅಂತಿಮ ಹಂತದವರೆಗೂತಮ್ಮ ಪ್ರತಿಭೆ ಪ್ರದರ್ಶಿಸಿದ್ದರು. ಸಂಗೀತಕಲಾವಿದೆಯೂಆದಇವರನ್ನು ಸತ್ಕರಿಸಲಾಯಿತು.

ಮಲ್ಲಿಕಾರ್ಜುನ ಶಿರಗುಪ್ಪಿಶೆಟ್ಟರ ಪ್ರಾರ್ಥನೆ ಹೇಳಿದರು, ಉಮಾದೇವಿ ನಿಜಗುಲಿ, ಬಸವರಾಜಕಮ್ಮಾರ, ಅಭಿಲಾಷ, ಸುಜಾತಾ ಕಲಮೇಶ, ಶ್ರೀರಂಗ ಜೋಶಿ ಇವರು ಸಂಗೀತ ಕಾರ್‍ಯಕ್ರಮ ನೀಡಿದರು.ಅಡವಯ್ಯಾ ಮಠದ, ಬಸವರಾಜ ಮಠದ ತಬಲಾ ಸಾಥ ನೀಡಿದರು.ಭೀಮನಗೌಡ ಪಾಟೀಲ, ಕಲಮೇಶ ಬಡಿಗೇರ ಹಾರ್ಮೋನಿಯಂ ನುಡಿಸಿದರು.ಬಿ.ಎಚ್.ಮಾರದ, ನಿರುಪಾದಯ್ಯ ಕಲ್ಲೋಳಿಮಠ ಮಾತನಾಡಿದರು. ಕಾರ್ಯಕ್ರಮದಲ್ಲಿ ವಿರುಪಾಕ್ಷ ವಾಲಿ, ರಾಜಕುಮಾರಮ್ಯಾಗೋಟಿ, ಭಾರತಿಅಮಾಸೆ, ರೇಣುಕಾಖಟಾವಕರ, ಎಸ್,ಎಸ್, ನಂಜನ್ನವರ ಸೇರಿದಂತೆಅನೇಕರು ಭಾಗವಹಿಸಿದ್ದರು. ಗೋಪಾಲ ಖಟಾವಕರ ನಿರೂಪಿಸಿ ವಂದಿಸಿದರು.